ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ: ಉಕೃನಿ(ಕೃಯಾಂ&ಸೂನೀ)/LAQ-1984/2024-25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 19.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ. ದರ್ಶನ್ ಧ್ರುವನಾರಾಯಣ (ನಂಜನಗೂಡು) ಇವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1984 ಕ್ಕೆ ಉತ್ತರಗಳನ್ನು ಸಲ್ಲಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ. ದರ್ಶನ್ ಧ್ರುವನಾರಾಯಣ (ನಂಜನಗೂಡು) ಇವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1984 ಕ್ಕೆ ಉತ್ತರಗಳನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		ಎಲ್.ಎ.ಕ್ಯೂ.1984
ಸದಸ್ಯರ ಹೆಸರು		ಶ್ರೀ. ದರ್ಶನ್ ಧ್ರುವನಾರಾಯಣ (ನಂಜನಗೂಡು)
ಉತ್ತರಿಸಬೇಕಾದ ದಿನಾಂಕ		24.07.2024
ಉತ್ತರಿಸುವ ಸಚಿವರು		ಮಾನ್ಯ ಕೃಷಿ ಸಚಿವರು.
ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೃಷಿ ಸಂಶೋಧನಾ ಕೇಂದ್ರ ಮತ್ತು ಕೇಂದ್ರಗಳಿಲ್ಲದೇ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೃಷಿ ಸಂಶೋಧನಾ ಕೇಂದ್ರ ಮತ್ತು ತರಬೇತಿ ಕೇಂದ್ರ ಮಂಜೂರು ಮಾಡಲಾಗುವುದೇ; ಮಾಹಿತಿ ನೀಡುವುದು;	ನಂಜನಗೂಡು ತಾಲ್ಲೂಕಿನಲ್ಲಿ ಪ್ರಸ್ತುತ ಕೃಷಿ ವಿಜ್ಞಾನ ಕೇಂದ್ರ (ಜೆ.ಎಸ್.ಎಸ್. ನಂಜನಗೂಡು) ಹಾಗೂ ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ (ನಾಗನಹಳ್ಳಿ) ಕಾರ್ಯನಿರ್ವಹಿಸುತ್ತಿದ್ದು ರೈತರಿಗೆ ಸಕಾಲದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ.
ಆ)	ನಂಜನಗೂಡು ತಾಲ್ಲೂಕು ಇಂದಿರಾನಗರದಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಸುಮಾರು ೧೫೦ ಎಕರೆ ವಿಸ್ತೀರ್ಣ ಪ್ರದೇಶವಿದ್ದು ಅಲ್ಲಿ ಕೃಷಿ ಸಂಶೋಧನಾ ಕೇಂದ್ರ ಮತ್ತು ತರಬೇತಿ ಕೇಂದ್ರ ಪ್ರಾರಂಭಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು)	ನಂಜನಗೂಡು ತಾಲ್ಲೂಕು ಇಂದಿರಾನಗರದಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಜಮೀನು ಇರುವುದಿಲ್ಲ.
ಇ)	ನಂಜನಗೂಡು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರಾವರಿ ಆಧಾರಿತ ಬೆಳೆ ಬೆಳೆಯುವ ರೈತರು ಹೆಚ್ಚಿರುವ ಹಿನ್ನೆಲೆಯಲ್ಲಿ ಪವರ್ ಟಿಲ್ಲರ್ ಗಳ ಬೇಡಿಕೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೃಷಿ ಯಾಂತ್ರೀಕರಣ ಯೋಜನೆಯಡಿ ನಿಗದಿಪಡಿಸಿರುವ ಗುರಿಗಳನ್ನು ಹೆಚ್ಚಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು)	ನಂಜನಗೂಡು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರಾವರಿ ಆಧಾರಿತ ಬೆಳೆ ಬೆಳೆಯುವ ರೈತರು ಹೆಚ್ಚಿರುವ ಹಿನ್ನೆಲೆಯಲ್ಲಿ ಪವರ್ ಟಿಲ್ಲರ್ ಗಳ ಬೇಡಿಕೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2024-25 ನೇ ಸಾಲಿನವರೆಗೆ ಒಟ್ಟು 965 ಪವರ್ ಟಿಲ್ಲರ್ ಅರ್ಜಿಗಳು ಬಾಕಿ ಇದ್ದು, 176 ರೈತರಿಗೆ ಪವರ್ ಟಿಲ್ಲರ್ ಅನ್ನು ವಿತರಿಸಲಾಗಿದೆ. ಪ್ರಸಕ್ತ ಸಾಲಿಗೆ ನಂಜನಗೂಡು ವಿಧಾನಸಭಾ ಕ್ಷೇತ್ರ 54 ಪವರ್ ಟಿಲ್ಲರ್ ಗಳ ಗುರಿ ನೀಡಲಾಗಿರುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಆಧಾರದ ಮೇಲೆ ಹೆಚ್ಚಿನ ಪವರ್ ಟಿಲ್ಲರ್ ಗಳನ್ನು ವಿತರಿಸಲಾಗುತ್ತದೆ.

....2)

ಕ್ರ.ಸಂ.	ಪ್ರಶ್ನೆ	ಉತ್ತರ
ಈ)	ಹಾಗಿದ್ದಲ್ಲಿ, ಕೃಷಿ ಇಲಾಖೆಯ ಕೃಷಿ ಯಾಂತ್ರೀಕರಣ ಹಾಗೂ ವಿವಿಧ ಯೋಜನೆಗಳಡಿ ರೈತರಿಗೆ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಸಬ್ಸಿಡಿ ದರದಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆಯೇ: ಹಾಗಿದ್ದಲ್ಲಿ, ಕೃಷಿ ಯಾಂತ್ರೀಕರಣ ಹಾಗೂ ವಿವಿಧ ಯೋಜನೆಗಳಡಿ ರೈತರಿಗೆ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಸಬ್ಸಿಡಿ ದರದಲ್ಲಿ ಖರೀದಿಸಲು ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿ ಎಷ್ಟು;	ಕೃಷಿ ಇಲಾಖೆಯ ಕೃಷಿ ಯಾಂತ್ರೀಕರಣ ಹಾಗೂ ವಿವಿಧ ಯೋಜನೆಗಳಡಿ ರೈತರಿಗೆ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಸಬ್ಸಿಡಿ ದರದಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಕೃಷಿ ಯಾಂತ್ರೀಕರಣ ಹಾಗೂ ವಿವಿಧ ಯೋಜನೆಗಳಡಿ ರೈತರಿಗೆ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಸಬ್ಸಿಡಿ ದರದಲ್ಲಿ ಖರೀದಿಸಲು ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಉ)	ಕೃಷಿ ಭಾಗ್ಯದಡಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿ ಎಷ್ಟು; ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನೇ?	ಪ್ರಸಕ್ತ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದಿಂದ ರೂ.200.00 ಕೋಟಿ ಅನುದಾನ ಒದಗಿಸಲಾಗಿದ್ದು, 8303 (ಭೌತಿಕ ಗುರಿ) ಕೃಷಿ ಹೊಂಡ ಹಾಗೂ ಪೂರಕ ಘಟಕಗಳನ್ನು ಅನುಷ್ಠಾನಗೊಳಿಸಲು ಜಿಲ್ಲೆಗಳಿಗೆ ವಾರ್ಷಿಕ ಕ್ರಿಯಾಯೋಜನೆ ನೀಡಲಾಗಿದೆ. ಯೋಜನೆಯ ಪ್ರಾಮುಖ್ಯತೆ ಹಾಗೂ ಬರ ಉಪಶಮನದ ಉದ್ದೇಶದೊಂದಿಗೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಬರ ಉಪಶಮನ ನಿಧಿ (NDMF) ಅಡಿಯಲ್ಲಿ ಕೃಷಿ ಹೊಂಡ ಹಾಗೂ ಪೂರಕ ಘಟಕಗಳನ್ನು ಅನುಷ್ಠಾನ ಮಾಡಲು ರೂ. 100.00 ಕೋಟಿಗಳ ಅನುದಾನ ಒದಗಿಸಲು ಕೋರಿ ಕಂದಾಯ ಇಲಾಖೆಯ ಮುಖಾಂತರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಕೃಷಿ ನಿರ್ದೇಶಕರು

ಅನುಬಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1984 ಶ್ರೀ ದರ್ಶನ್ ಧ್ರುವನಾರಾಯಣ ಮಾನ್ಯ ಶಾಸಕರು ನಂಜನಗೂಡು ವಿಧಾನಸಭಾ ಕ್ಷೇತ್ರ

ಯೋಜನೆ :2024-25 ನೇ ಸಾಲಿನ ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ SMAM ಯೋಜನ

ಕ್ರ.ಸಂ.	ಉಪಕರಣದ ವಿವಿರ	ಸಾಮಾನ್ಯ (ಗುರಿ)		ವಿಷೇಶ ಘಟಕ ಯೋಜನೆ (ಗುರಿ)		ಗಿರಿಜನ ಉಪ ಯೋಜನೆ (ಗುರಿ)		ಒಟ್ಟು (ಗುರಿ)	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಗುರಿ	ಆರ್ಥಿಕ
1	ಮಿನಿ ಟ್ರ್ಯಾಕ್ಟರ್	2	1.5	0	0	0	0	2	1.5
2	ಪವರ್ ಟಿಲ್ಲರ್	50	41.25	0	0	0	0	50	41.25
3	ಸ್ವಯಂ ಚಾಲಿತ ಉಪಕರಣಗಳು	8	4	0	0	0	0	8	4
4	ಟ್ರ್ಯಾಕ್ಟರ್/ಪವರ್ ಟಿಲ್ಲರ್/ಇಂಜಿನ್/ಮೋಟಾರ್ ಚಾಲಿತ	40	20	0	0	0	0	40	20
5	ಸಸ್ಯ ಸಂರಕ್ಷಣ ಉಪಕರಣಗಳು	1	0.5	0	0	0	0	1	0.5
6	ಡೀಸೆಲ್ ಪಂಪ್ ಸೆಟ್	0	0	0	0	0	0	0	0
	ಒಟ್ಟು	**101**	**67.25**	**0**	**0**	**0**	**0**	**101**	**67.25**

ಯೋಜನೆ : 2024-25 ನೇ ಸಾಲಿನ ರಾಜ್ಯ ವಲಯ ಕೃಷಿ ಯಾಂತ್ರೀಕರಣ ಯೋಜನೆ

ಕ್ರ.ಸಂ.	ಉಪಕರಣದ ವಿವಿರ	ಸಾಮಾನ್ಯ (ಗುರಿ)		ವಿಷೇಶ ಘಟಕ ಯೋಜನೆ (ಗುರಿ)		ಗಿರಿಜನ ಉಪ ಯೋಜನೆ (ಗುರಿ)		ಒಟ್ಟು (ಗುರಿ)	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಗುರಿ	ಆರ್ಥಿಕ
1	ಮಿನಿ ಟ್ರ್ಯಾಕ್ಟರ್	0	0	0	0	0	0	0	0
2	ಪವರ್ ಟಿಲ್ಲರ್	50	8.75	3	3	1	1	54	12.75
3	ಸ್ವಯಂ ಚಾಲಿತ ಉಪಕರಣಗಳು	8	2	0	0	0	0	8	2
4	ಟ್ರ್ಯಾಕ್ಟರ್/ಪವರ್ ಟಿಲ್ಲರ್/ಇಂಜಿನ್/ಮೋಟಾರ್ ಚಾಲಿತ	40	10	2	2	0	0	42	12
5	ಸಸ್ಯ ಸಂರಕ್ಷಣ ಉಪಕರಣಗಳು	1	0.25	0	0	0	0	1	0.25
6	ಡೀಸೆಲ್ ಪಂಪ್ ಸೆಟ್	0		0	0	0	0	0	0
	ಒಟ್ಟು	**99**	**21**	**5**	**5**	**1**	**1**	**105**	**27**

ಯೋಜನೆ : 2024-25 ನೇ ಸಾಲಿನ ಆಹಾರ ಮತ್ತು ಪೌಷ್ಠಿಕಾಂಶ ಭದ್ರತಾ ಯೋಜನೆ

ಕ್ರ.ಸಂ.	ಉಪಕರಣದ ವಿವಿರ	ಸಾಮಾನ್ಯ (ಗುರಿ)		ವಿಷೇಶ ಘಟಕ ಯೋಜನೆ (ಗುರಿ)		ಗಿರಿಜನ ಉಪ ಯೋಜನೆ (ಗುರಿ)		ಒಟ್ಟು (ಗುರಿ)	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಗುರಿ	ಆರ್ಥಿಕ
1	ಪವರ್ ಟಿಲ್ಲರ್	2	1.2	0	0	0	0	2	1.2
2	ಸ್ವಯಂ ಚಾಲಿತ ಉಪಕರಣಗಳು	0	0	0	0	0	0	0	0
3	ಟ್ರ್ಯಾಕ್ಟರ್/ಪವರ್ ಟಿಲ್ಲರ್/ಇಂಜಿನ್/ಮೋಟಾರ್ ಚಾಲಿತ	2	1	0	0	0	0	2	1
4	ಸಸ್ಯ ಸಂರಕ್ಷಣ ಉಪಕರಣಗಳು	2	0.2	0	0	0	0	2	0.2
5	ಡೀಸೆಲ್ ಪಂಪ್ ಸೆಟ್	0	0	0	0	0	0	0	0
	ಒಟ್ಟು	**6**	**2.4**	**0**	**0**	**0**	**0**	**6**	**2.4**

ಜಂಟಿ ಕೃಷಿ ನಿರ್ದೇಶಕರು
ಮೈಸೂರು ಜಿಲ್ಲೆ, ಮೈಸೂರು